ಇ) ಈಗಿನ ಜನರ ಬೇಡಿಕೆಗೆ ಅನುಗುಣವಾಗಿ ಹೊಸ ಹೊಸ ಮಾದರಿಯ ಬಟ್ಟೆಗಳನ್ನು ಮತ್ತು ಸೀರೆಗಳನ್ನು ತಯಾರಿಸಲು ನೇಕಾರರಿಗೆ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ನೂತನ ಜವಳಿ ನೀತಿ ಯೋಜನೆಯಡಿ ಕೈಮಗ್ಗ / ವಿದ್ಯುತ್‌ಮಗ್ಗ ನೇಕಾರರಿಗೆ ನೇಕಾರಿಕೆ ವೃತ್ತಿಯಲ್ಲಿ ಮುಂದುವರೆದ ತರಬೇತಿಯನ್ನು ನೀಡಲಾಗುತ್ತಿದೆ.
- ಕೈಮಗ್ಗ ವಿಕಾಸ ಯೋಜನೆಯಡಿ ಸುಧಾರಿತ ಕೈಮಗ್ಗ ಮತ್ತು ಸಲಕರಣೆ ಖರೀದಿಗಾಗಿ ಶೇಕಡ 50 ರಷ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.
- ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಪ್ರತಿಯೊಂದು ಸೀರೆಗೂ ಒಂದೊಂದು ಪ್ರತ್ಯೇಕ ವಿನ್ಯಾಸ ನೇಯಲು ಅನುಕೂಲವಾಗುವಂತೆ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಇತರೆ ಜಾತಿಗೆ ಶೇಕಡ 50 ರಷ್ಟು ಸಹಾಯಧನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಶೇ. 90 ರಷ್ಟು ಒದಗಿಸಲಾಗುತ್ತಿದೆ.

ಅಪರೂಪದ ಪ್ರಾಣಿ ಚಿಂಕಾರದ (ಇಂಡಿಯನ್ ಘಜಲ್) ಬಗ್ಗೆ

2112 (2517); ಶ್ರೀ ಪಾಟೀಲ್ ಜೆ.ಟಿ. (ಬೀಳಗಿ)

ಅ) ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಅಪರೂಪದ ಪ್ರಾಣಿ ಚಿಂಕಾರ (ಇಂಡಿಯನ್ ಘಜಲ್)ಇರುವುದರಿಂದ ಅವುಗಳ ರಕ್ಷಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಆ) ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ, ಯಡಹಳ್ಳಿ ಹಾಗೂ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ರಾಷ್ಟ್ರೀಯ ಪಕ್ಷಿಯಾದ ನವಿಲು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇವುಗಳ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಬೀಳಗಿ ತಾಲ್ಲೂಕಿನಲ್ಲಿ 30,000 ಕ್ಕಿಂತಲೂ ಹೆಚ್ಚಿನ ಎಕರೆ ಕಾಯ್ದಿಟ್ಟ ಅರಣ್ಯ (ರಿಸರ್ವ್ ಫಾರೆಸ್ಟ್) ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಸರ್ಕಾರ ಯಾವುದೇ ಆರ್ಥಿಕ ಹೊರೆಯಿಲ್ಲದ ಕೇವಲ ಇಲಾಖೆಯವರ ರಕ್ಷಣೆಯಲ್ಲಿ ದಟ್ಟವಾದ ಕನಿಷ್ಟ 20,000 ಎಕರೆಗಿಂತಲೂ ಹೆಚ್ಚು ಅರಣ್ಯವನ್ನು ಬೆಳೆಸಲು ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಅರಣ್ಯವನ್ನು ರಕ್ಷಿಸಲು, ಉತ್ತಮವಾದ ಅರಣ್ಯವನ್ನು ಬೆಳೆಸಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತಿದೆ (ವಿವರ ನೀಡುವುದು)?

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಅಪರೂಪದ ಪ್ರಾಣಿ ಚಿಂಕಾರಾ (ಇಂಡಿಯನ್ ಘಜಲ್) ಇರುವುದರಿಂದ ಅವುಗಳನ್ನು ಸಂರಕ್ಷಿಸುವ ಸಲುವಾಗಿ ವನ್ಯಜೀವಿ ಸಂರಕ್ಷಿತ ಪ್ರದೇಶವನ್ನು ಸ್ಥಾಪಿಸಲು ಪರಿಶೀಲಿಸಲಾಗುತ್ತಿದೆ.

ಆ) ಹೌದು

ಇ) ಇವುಗಳ ರಕ್ಷಣೆಗಾಗಿ ವನ್ಯಜೀವಿ (ಸಂರಕ್ಷಣೆ) ಕಾಯ್ದೆ, 1972ರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಹೌದು

ಉ) ಹೌದು

ಊ) ಆಯಾ ವರ್ಷದಲ್ಲಿ ಲಭ್ಯವಾಗುವ ಅನುದಾನಕ್ಕನುಸಾರವಾಗಿ ನೆಡುತೋಪು ಬೆಳೆಸುವುದು, ನೆಡುತೋಪು ನಿರ್ವಹಣೆ, ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕಾಮಗಾರಿ, ಅರಣ್ಯ ಪ್ರದೇಶಗಳ ರಕ್ಷಣೆ ಕಾಮಗಾರಿಗಳಾದ ಬೆಂಕಿ ತಡೆ ಲೈನುಗಳ ನಿರ್ಮಾಣ ಮತ್ತು ನಿರ್ವಹಣೆ, ಬೆಂಕಿ ಕಾವಲುಗಾರರ ನೇಮಕ, ಜಾನುವಾರು ಕಂದಕ ನಿರೋಧಕ, ಮುಳ್ಳುತಂತಿ ಬೇಲಿ ನಿರ್ಮಾಣ, ರಬಲ್ ಸ್ಟೋನ್ ವಾಲ್ ನಿರ್ಮಿಸುವುದರ ಮೂಲಕ ಅರಣ್ಯವನ್ನು ರಕ್ಷಣೆ ಮಾಡಲಾಗುತ್ತದೆ. ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಭೌಗೋಳಿಕ ಪ್ರದೇಶದ ಶೇ.33ರಷ್ಟು ಅರಣ್ಯ/ಅರಣ್ಯತರ ಪ್ರದೇಶವನ್ನು ಹೆಚ್ಚಿಸಲು ಜಿಲ್ಲಾ ಮತ್ತು ರಾಜ್ಯ ವಲಯ ಯೋಜನೆಗಳಿಂದ ರಸ್ತೆಬದಿ ನೆಡುತೋಪು, ನಗರ ಪ್ರದೇಶಗಳಲ್ಲಿ, ಟ್ರೀ ಪಾರ್ಕ್‌ಗಳಲ್ಲಿ ಗ್ರಾಮೀಣ ಪ್ರದೇಶದ ಸಮುದಾಯ ಭೂಮಿ, ಗೋಮಾಳ ಭೂಮಿ, ಸಿ & ಡಿ ಭೂಮಿ ಮತ್ತು ಸರ್ಕಾರೇತರ ಜಮೀನುಗಳಲ್ಲಿ ಸಸಿಗಳನ್ನು ನಾಟಿ ಮಾಡುವುದರಿಂದ ವೃಕ್ಷ ಕವಚ ಹೆಚ್ಚಾಗುತ್ತದೆ.

ಅರಣ್ಯದ ಮೇಲೆ ಒತ್ತಡ ಕಡಿಮೆ ಮಾಡಲು ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಕಾಂಪಾ ಮತ್ತು ವನ್ಯಜೀವಿ ಯೋಜನೆ ಕಾರ್ಯಕ್ರಮಗಳಲ್ಲಿ ಅರಣ್ಯ ಅಂಚಿನ ಗ್ರಾಮದ ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕ ಸಾಧನ, ಸರಳ ಒಲೆ, ಜೈವಿಕ ಅನಿಲ ಸ್ಥಾವರ ನಿರ್ಮಾಣ, ಸೋಲಾರ್ ವಾಟರ್ ಹೀಟರ್ ಸಾಧನ ಮುಂತಾದವುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಮುಂದುವರೆದು, ರೈತರ ಜಮೀನಿನಲ್ಲಿ ನೆಡುತೋಪು ಬೆಳೆಸಲು ಉತ್ತೇಜನ ನೀಡುವ ಸಲುವಾಗಿ ಇಲಾಖೆಯಿಂದ ಕೃಷಿ ಪ್ರೋತ್ಸಾಹ ಯೋಜನೆಯಡಿಯಲ್ಲಿ ರಿಯಾಯಿತಿ ದರದಲ್ಲಿ ಸಸಿಗಳನ್ನು ಬೆಳೆಸಿ ರೈತರಿಗೆ ಮಾರಾಟ ಮಾಡಿ ಬದುಕುಳಿದ ಸಸಿಗಳಿಗೆ ಮೂರು ವರ್ಷಗಳು ಪ್ರೋತ್ಸಾಹಧನ ನೀಡಲಾಗುವುದು.